

# ಭಯಾನಕ ರೈಫಲ್ ಎಎನ್-94

■ ಶಶಿಕುಮಾರ್ ಸಿ.

ಪಂಜಾಬಿ ಗಾಯಕ ಹಾಗೂ ಕಾಂಗ್ರೆಸ್ ನಾಯಕ ಸಿಧು ಮೂಸೆ ವಾಲಾ ಅವರನ್ನು ಈಚೆಗೆ ಗುಂಡಿಕ್ಕಿ ಹತ್ಯೆ ಮಾಡಲಾಯಿತು. ಅವರ ಹತ್ಯೆಯಷ್ಟೇ ಸದ್ದು ಮಾಡಿದ್ದು ಹತ್ಯೆಗೆ ಕೆನಡಾದ ದರೋಡೆಕೋರ ಗೋಲ್ಡಿ ಬ್ರಾರ್ ಬಳಸಿದ ರೈಫಲ್! ಅದರ ಹೆಸರು ಎಎನ್–94 ರೈಫಲ್. ಇದು ರಷ್ಯಾ ಸೇನಾಪಡೆಯು ಬಳಸುವ ವಿಧ್ವಂಸಕ ರೈಫಲ್.

ಒಂದು ನಿಮಿಷಕ್ಕೆ ಬರೋಬ್ಬರಿ 1800 ಗುಂಡುಗಳನ್ನು ಎದುರಾಳಿಯ ಎದೆಹೊಕ್ಕಿಸುವ ಸಾಮರ್ಥ್ಯ ಎಎನ್–94 ರೈಫಲ್‌ನ ತಾಂತ್ರಿಕ ವಿಶೇಷ. ಎಕೆ–47ಗಿಂತಲೂ ಹೆಚ್ಚು ವಿಧ್ವಂಸಕ ಗುಣ ಇದಕ್ಕಿದೆ. ಸಿಧು ಹತ್ಯೆ ಪ್ರಕರಣದಲ್ಲಿ ಹಂತಕ ಚಿಮ್ಮಿಸಿದ್ದು ಕೇವಲ 2 ಸುತ್ತಿನಲ್ಲಿ 30 ಗುಂಡುಗಳನ್ನು. ಹಂತಕರು ಮೂಸೆ ವಾಲಾ ಅವರನ್ನು ಹತ್ಯೆ ಮಾಡಲು ಮುಂದಾಗಿದ್ದರು. ಆಗ ಅವರ ಭದ್ರತೆಗೆಂದು ನಿಯೋಜಿಸಿದ್ದ ಎಕೆ–47 ರೈಫಲ್ ಶಸ್ತ್ರಸಜ್ಜಿತ ಕಮಾಂಡೊಗಳನ್ನು ಕಂಡು ಹಂತಕರು ಹಿಂದಿರುಗಿದ್ದರು. ನಂತರ ಗೋಲ್ಡಿ ಬ್ರಾರ್‌ನಿಂದ ಎಎನ್–94 ರೈಫಲ್‌ನೊಂದಿಗೆ ಕ್ಷಣಮಾತ್ರದಲ್ಲಿ ಗುಂಡುಹಾರಿಸಿ ಪರಾರಿಯಾಗಿದ್ದ.

### ಎಎನ್-94 ವಿಶೇಷ

ಎಎನ್–94ರ ಒಂದು ಸುತ್ತಿನ ಮೋಡ್‌ನಲ್ಲಿ ನಿಮಿಷಕ್ಕೆ 600 ಗುಂಡುಗಳು ಪೂರ್ಣ ಮೋಡ್‌ನಲ್ಲಿದ್ದರೆ 1,800 ಬುಲೆಟ್‌ಗಳನ್ನು ಹಾರಿಸಬಲ್ಲದು. ಎಕೆ–47 ರೈಫಲ್‌ನಿಂದ 715 ಮೀಟರ್ ವೇಗದಲ್ಲಿ ಗುಂಡು ಹಾರಿದರೆ, ಎಎನ್ 94ನಲ್ಲಿ 900 ಮೀಟರ್ ವೇಗದಲ್ಲಿ ಅಂದರೆ ಪ್ರತಿ ಸೆಕೆಂಡಿಗೆ 3 ಸಾವಿರ ಅಡಿ ವೇಗದಲ್ಲಿ ಬುಲೆಟ್ ಹಾರುತ್ತದೆ. ಇದು 30ರಿಂದ 45 ಕಾರ್ಟ್ರಿಡ್ಜ್ ಮ್ಯಾಗಜೀನ್ ಸಾಮರ್ಥ್ಯ ಹೊಂದಿದೆ. ಈ ರೈಫಲ್ 3.85 ಕೆಜಿ ತೂಕವಿದ್ದು, 37.1 ಇಂಚಿನಷ್ಟು ಸ್ಟಾಕ್‌ಬಟ್ ಹಾಗೂ 28.7 ಇಂಚಿನಷ್ಟು ಅಗಲವಿದೆ. ಉದ್ದ 15.9 ಇಂಚು.

### ಎಕೆ-47ಗಿಂತಲೂ ಭಯಾನಕ!

ಎಎನ್–94 ರೈಫಲ್ ಎಲ್‌ಐ–291 ಅಂತಲೂ ಹೆಸರುವಾಸಿ. 'ಅವ್ಟೊಮತ್ ನಿಕೊನೊವಾ' ಎಂಬುದು ಎಎನ್ ಎಂಬ ಅಕ್ಷರದ ಸಂಕ್ಷಿಪ್ತ. 'ಅವ್ಟೊಮತ್ ನಿಕೊನೊವಾ' ಮಾಡೆಲ್ 1994 ಅನ್ನು ಸೂಚಿಸುತ್ತದೆ. ಎಎನ್94 ಅನ್ನು ಗೆನ್ನಡಿ ನಿಕೊನೊವ್ ಎಂಬ ಮುಖ್ಯ ವಿನ್ಯಾಸಕ ವಿನ್ಯಾಸಗೊಳಿಸಿದ್ದಾನೆ. ಇದೇ ವ್ಯಕ್ತಿ ಹಿಂದೆ ನಿಕೊನೊವ್ ಮೆಷಿನ್ ಗನ್ ಅನ್ನು ವಿನ್ಯಾಸಗೊಳಿಸಿ ಸದ್ದು ಮಾಡಿದ್ದರು. 1980ರಲ್ಲಿ ಶುರುವಾದ ಎಎನ್94 ಅಭಿವೃದ್ಧಿಪಡಿಸುವ ಕಾರ್ಯವು 1994ರಲ್ಲಿ ಪೂರ್ಣಗೊಂಡಿತು. 1997ರಲ್ಲಿ ರಷ್ಯಾ ಸೈನ್ಯಕ್ಕೆ ಎಎನ್94 ರೈಫಲ್ ಸೇರಿಸಲಾಯಿತು. ಈಗಲೂ ರಷ್ಯಾ ಇದನ್ನು ಬಳಸುತ್ತಿದೆ. ■

## ವಾಟ್ಸಾಪ್: ಬರಲಿದೆ ಮೆಸೇಜ್ ಎಡಿಟ್ ಆಯ್ಕೆ!

ಸಂದೇಶ ರವಾನೆಗೆ ಸಾಕಷ್ಟು ಮಂದಿ ವಾಟ್ಸಾಪ್ ಮೇಲೆ ಅವಲಂಬಿತರು. ತ್ವರಿತವಾಗಿ ಮೆಸೇಜ್ ಕಳುಹಿಸುವ ಭರದಲ್ಲಿ ತಪ್ಪುತಪ್ಪಾಗಿ, ಅಕ್ಷರ ದೋಷಗಳಿಂದ ಕೂಡಿದ ಹಾಗೂ ಅಪೂರ್ಣ ಮಾಹಿತಿಯುಳ್ಳ ಸಂದೇಶ ಕಳುಹಿಸುವುದು ಸರ್ವೇ ಸಾಮಾನ್ಯ. ಹಾಗೇ ತಪ್ಪಾಗಿ ಕಳುಹಿಸಿದ ಮೆಸೇಜ್‌ನಿಂದಾಗಿ ಮುಜುಗರ ಎದುರಿಸಬೇಕಾದದ್ದು ಕಸಿವಿಸಿ ವಿಚಾರ.

ತನ್ನ ಗ್ರಾಹಕರು ಎದುರಿಸುತ್ತಿರುವ ಈ ಸಮಸ್ಯೆಗೆ ವಾಟ್ಸಾಪ್ ಪರಿಹಾರ ಕಲ್ಪಿಸಲು ಮುಂದಾಗಿದ್ದು, ಈಗಾಗಲೇ ಕಳುಹಿಸಿದ ಯಾವುದೇ ಮೆಸೇಜ್ ಅನ್ನು ಎಡಿಟ್ ಮಾಡುವ ಫೀಚರ್ ಅಭಿವೃದ್ಧಿ ನಿಟ್ಟಿನಲ್ಲಿ ಅದು ತೊಡಗಿದೆ. ಈ ನಿಟ್ಟಿನಲ್ಲಿ ಪ್ರಾಯೋಗಿಕ ಪರೀಕ್ಷೆಗೆ ಸಜ್ಜಾಗಿದೆ.

ಈ ಬಗ್ಗೆ ವಾಬೀಟಾ ಇನ್ಫೋ ವರದಿ ಮಾಡಿದ್ದು, ವಾಟ್ಸಾಪ್ ಮೂಲಕ ಕಳುಹಿಸಲಾಗುವ ಮೆಸೇಜ್‌ಗಳಲ್ಲಿ ಕೆಲವೊಮ್ಮೆ ಅಕ್ಷರ ದೋಷಗಳು, ತಪ್ಪುಗಳು ಹಾಗೂ ಏನಾದರೂ ಮಾಹಿತಿ ಬಿಟ್ಟುಹೋಗಿದ್ದರೆ ಅದನ್ನು ಮತ್ತೆ ಎಡಿಟ್ ಮಾಡುವ ಆಯ್ಕೆಯನ್ನು ವಾಟ್ಸಾಪ್ ಒದಗಿಸಲಿದೆ. ವಾಟ್ಸಾಪ್ ಮೇಲೆ ಹೆಚ್ಚು ಅವಲಂಬಿತವಾಗಿರುವವರಿಗೆ ಈ ಆಯ್ಕೆಯು ಹೆಚ್ಚು ಅನುಕೂಲವಾಗಲಿದೆ.

ಗ್ರೂಪ್ ಪೋಲ್ಸ್, ವಾಟ್ಸಾಪ್ ಪ್ರೀಮಿಯಂ ಮತ್ತು ವಾಟ್ಸಾಪ್‌ನಲ್ಲಿ ಈ ಫೀಚರ್ ಅನ್ನು ಕಾಣಿಸಿಕೊಳ್ಳಲಿದ್ದು, ಆ್ಯಂಡ್ರಾಯ್ಡ್, ಐಒಎಸ್ ಮತ್ತು ಡೆಸ್ಕ್‌ಟಾಪ್‌ನ ಆವೃತ್ತಿಗಳಲ್ಲಿ ಇದು ಲಭ್ಯವಾಗಲಿದೆ. ಸದ್ಯ ಈ ಫೀಚರ್ ಅಭಿವೃದ್ಧಿ ಹಂತದಲ್ಲಿದೆ. ಇದರ ಜೊತೆಗೆ ಡೆಸ್ಕ್‌ಟಾಪ್ ವರ್ಷನ್‌ನಲ್ಲಿ ಕವರ್ ಫೋಟೊ ಸೆಟ್ ಮಾಡುವ ವಿಶೇಷ ಫೀಚರ್ ಅಭಿವೃದ್ಧಿಗೆ ಕಂಪನಿ ಕೈಹಾಕಿದೆ.

'ಕಳುಹಿಸಿದ ಮೆಸೇಜ್ ಎಡಿಟ್ ಮಾಡಿದರೆ ಅದರ ಹಿಸ್ಟರಿಯು ಲಭ್ಯವಾಗುವುದಿಲ್ಲ ಎಂಬ ಮಾಹಿತಿ ಸದ್ಯಕ್ಕೆ ಹೊರಬಿದ್ದಿದೆ. ಆದರೆ ಈ ಫೀಚರ್ ಇನ್ನೂ ಅಭಿವೃದ್ಧಿ ಹಂತದಲ್ಲಿರುವುದರಿಂದ ಅಂತಿಮ ಘಟ್ಟದ ವೇಳೆಗೆ ಆ ಆಯ್ಕೆಯೂ ಸೇರಿಕೊಳ್ಳಬಹುದು. ಜೊತೆಗೆ ಕೆಲ ಬದಲಾವಣೆಗಳೂ ಜೊತೆಗೂಡುವ ಸಾಧ್ಯತೆ ಇದೆ' ಎಂದು ವಾಬೀಟಾಇನ್ಫೋ ವರದಿ ಮಾಡಿದೆ. ವಾಟ್ಸಾಪಿನಂತೆಯೇ ಟ್ವಿಟರ್ ಸಹ ಎಡಿಟ್ ಫೀಚರ್ ಅನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ತೊಡಗಿದೆ. ■